# ಕೆ.ಎ.ಎಸ್. ಪರೀಕ್ಷೆ - 2015

# (ಪೇಪರ್-1) ಸಾಮಾನ್ಯ ಜ್ಞಾನ

1. ರೈತವಾರಿ ಪದ್ಧತಿಯು ಬ್ರಿಟಿಷ್ ಭಾರತದ ದಕ್ಷಿಣ ಭಾಗದಲ್ಲಿ ಪರಿಚಯಿಸಿದ ಭೂಮಿ ಕರ ನಿರ್ಧರಣೆಯ ಪದ್ಧತಿಯಾಗಿತ್ತು. ಇದಕ್ಕೆ ಕಾರಣ:

   ಎ. ಬ್ರಿಟಿಷ್ ಭಾರತದಲ್ಲಿ ಭೂಮಿ ಕಂದಾಯ ಸಂಗ್ರಹಣೆಯನ್ನು ಹೆಚ್ಚಿಸುವುದು

   ಬಿ. ಭಾರತದ ಆರ್ಥಿಕತೆಯನ್ನು ಸುಧಾರಿಸುವುದು

   ಸಿ. ಭೂಮಾಲೀಕರ ಮೇಲೆ ಹಿಡಿತ ಸಾಧಿಸುವುದು

   ಡಿ. ಕ್ಷಾಮಗಳ ಪುನರಾವೃತ್ತಿಯನ್ನು ತಡೆಯುವುದು

2. ಮಾಪಿಳ್ಳೆ ದಂಗೆಯು ……… ಗೆ ಸಂಬಂಧಿಸಿದುದಾಗಿದೆ.

   ಎ. ಬುಡಕಟ್ಟು ಜನರ ಅತೃಪ್ತಿ

   ಬಿ. ರಾಷ್ಟ್ರೀಯವಾದಿಗಳ ಅತೃಪ್ತಿ

   ಸಿ. ಸೈನಿಕರ ಅತೃಪ್ತಿ  ಡಿ. ರೈತರ ಅತೃಪ್ತಿ

3. ನಾಗರಿಕ ಉಲ್ಲಂಘನಾ ಚಳುವಳಿಯ ಅವಧಿಯಲ್ಲಿ ಕರ್ನಾಟಕದಲ್ಲಿ ಈ ಕೆಳಗಿನ ಯಾವ ಸ್ಥಳಗಳನ್ನು ತೆರಿಗೆಗೆ ಒಳಪಡದ ಪ್ರದೇಶವೆಂದು ಆಯ್ಕೆ ಮಾಡಲಾಯಿತು?

   ಎ. ಕಾರವಾರ  ಬಿ ಸಿರಸಿ

   ಸಿ. ಸಿದ್ದಾಪುರ  ಡಿ. ಅಂಕೋಲ

4. ಭಾರತದ ರಾಷ್ಟ್ರೀಯತಾವಾದಿಗಳ ಚಳುವಳಿಯ ಇತಿಹಾಸದಲ್ಲಿ ಲಾಹೋರಿನ ಕಾಂಗ್ರೆಸ್ ಅಧಿವೇಶನವು ಒಂದು ಹೆಗ್ಗುರುತು. ಏಕೆಂದರೆ

   ಎ. ಕಾಂಗ್ರೆಸ್ ಅಂತೂ ಇಂತೂ ಕೊನೆಯಲ್ಲಿ ಪೂರ್ಣಸ್ವರಾಜ್ ನಂಬಿಕೆಯನ್ನು ಮತ್ತು ತ್ರಿವರ್ಣ ಧ್ವಜವನ್ನು ಅಳವಡಿಸಿಕೊಂಡಿತು.

   ಬಿ. ಅದು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವಿನ ಅಂತರದ ಸೇತುವೆಯನ್ನು ನಿರ್ಮಿಸಿತು.

   ಸಿ. ಅದು ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷಕ್ಕೆ ಒಂದು ಸಾಮಾನ್ಯ ವೇದಿಕೆಯನ್ನು ಒದಗಿಸಿತು.

   ಡಿ. ಕಾಂಗ್ರೆಸ್, ಚಕ್ರಾಧಿಪತ್ಯ ಸ್ಥಾನಮಾನ ಸ್ಥಿತಿಯನ್ನು ಒಪ್ಪಿಕೊಂಡಿತು.

5. ಭಾರತದಲ್ಲಿ ಕಂಪನಿ ರಾಜ್ಯದ ಚರಿತ್ರೆಯಲ್ಲಿ 1813ರ ಸನ್ನದು ಅಧಿನಿಯಮ ಒಂದು ಮುಖ್ಯ ಹೆಗ್ಗುರುತು. ಏಕೆಂದರೆ

   ಎ. ಈ ಅಧಿನಿಯಮವು ಭಾರತದಲ್ಲಿ ಕಂಪನಿ ಹೊಂದಿದ್ದ ಭಾರತೀಯ ಪ್ರಾಂತ್ಯಗಳ ಮೇಲೆ ಬ್ರಿಟಿಷ್ ಸಿಂಹಾಸನದ ಸಾರ್ವಭೌಮತ್ವವನ್ನು ಖಾತರಿಪಡಿಸಿತು.

   ಬಿ. ಈ ಅಧಿನಿಯಮವು ಕಂಪನಿಯ ವ್ಯಾಪಾರ ಏಕಸ್ವಾಮ್ಯಕ್ಕೆ ಅಂತ್ಯ ಹಾಡಿತು.

   ಸಿ. ಈ ಅಧಿನಿಯಮವು ಭಾರತ ಹಾಗೂ ಚೀನಾದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ವ್ಯಾಪಾರದ ಏಕಸ್ವಾಮ್ಯತೆಗೆ ಅವಕಾಶ ಕಲ್ಪಿಸಿತು.

   ಡಿ. ಈ ಅಧಿನಿಯಮವು ನಿಯಂತ್ರಣಾ ಮಂಡಳಿಗೆ ಕಂಪನಿಯ ಮೇಲೆ ಪೂರ್ಣ ಅಧಿಕಾರ ಮತ್ತು ಪ್ರಾಧಿಕಾರ ನೀಡಿತು.

6. ಈ ಮುಂದಿನವುಗಳನ್ನು ಸರಿ ಹೊಂದಿಸಿ.

| ಪಟ್ಟಿ - 1 | ಪಟ್ಟಿ - 2 |
|---|---|
| ಎ. ಬಂಜರು ವೃತ್ತ | 1. ಬಾತೋಲಿಸ್ಟ್ |
| ಬಿ. ಜ್ವಾಲಾಮುಖಿಗಳು | 2. ಎಕ್ಸ್‌ಫೋಲಿಯೇಷನ್ |
| ಸಿ. ಸುಣ್ಣಕಲ್ಲು ವಲಯಗಳು | 3. ಡಿಫ್ಲೇಷನ್ |
| ಡಿ. ವೆದರಿಂಗ್ | 4. ಪೊಲ್ಜೆ |

7. ಇಂಗ್ಲೆಂಡ್‌ನಿಂದ ಭಾರತಕ್ಕೆ ಅಧಿಕಾರ ವರ್ಗಾಯಿಸಲು ಬಾಲ್ಕನ್ ಯೋಜನೆಯನ್ನು ರೂಪಿಸಿದವರು ಮತ್ತು ಸಲಹೆ ಮಾಡಿದವರು ಯಾರು?

   ಎ. ಕ್ಲೆಮೆಂಟ್ ಅಟ್ಲೀ  ಬಿ. ವೇವೆಲ್

   ಸಿ. ಚರ್ಚಿಲ್  ಡಿ. ಮೌಂಟ್‌ಬ್ಯಾಟನ್

ಕೆಳಗಿನ ಎರಡು ಪ್ರಶ್ನೆಗಳಿಗೆ (ಪ್ರ.ಸಂ. 8 ಮತ್ತು 9) ನಿರ್ದೇಶನಗಳು : ಪ್ರತಿಪಾದನೆ (ಎ) ಮತ್ತು ಕಾರಣ (ಆರ್) ಎರಡೂ ಹೇಳಿಕೆಗಳನ್ನು ಓದಿ, ಕೊಟ್ಟಿರುವ ಎ, ಬಿ, ಸಿ ಅಥವಾ ಡಿ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

   ಎ. ಎ ಮತ್ತು ಆರ್ ಇವೆರಡೂ ಸರಿ ಮತ್ತು ಆರ್, ಎ ಯನ್ನು ವಿವರಿಸುತ್ತದೆ

   ಬಿ. ಎ ಮತ್ತು ಆರ್ ಇವೆರಡೂ ಸರಿ ಆದರೆ ಆರ್, ಎ ಯನ್ನು ವಿವರಿಸುವುದಿಲ್ಲ

   ಸಿ. ಎ ಸರಿ ಆದರೆ ಆರ್ ತಪ್ಪು

   ಡಿ. ಎ ತಪ್ಪು ಆದರೆ ಆರ್ ಸರಿ

8. ಪ್ರತಿಪಾದನೆ (ಎ): ಸೌರ ಉಷ್ಣ ಶಕ್ತಿಯಿಂದ ರಾಸಾಯನಿಕ ಶಕ್ತಿಗೆ ಉಂಟಾಗುವ ಪರಿವರ್ತನೆಯ ಪ್ರಕ್ರಿಯೆಯನ್ನು ದ್ಯುತಿಸಂಶ್ಲೇಷಣ ಕ್ರಿಯೆ ಎಂದು ಕರೆಯುತ್ತಾರೆ.

ಕಾರಣ (ಆರ್): ಸ್ವಪೋಷಕಗಳು (ಆಟೋ ಟ್ರೋಪ್‌ಗಳು) ಕಾರ್ಬೊಹೈಡ್ರೇಟ್‌ಗಳನ್ನು ಉತ್ಪಾದಿಸುವುದಕ್ಕಾಗಿ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರನ್ನು ಪರಿವರ್ತಿಸಲು ಮತ್ತು ಅಂತಿಮವಾಗಿ ಜೀವಿಗಳ ಬೆಂಬಲಕ್ಕಾಗಿ ಇತರ ಜೀವ ರಸಾಯನಿಕ ಅಣುಗಳನ್ನು ಉತ್ಪಾದಿಸಲು ಸೌರಶಕ್ತಿಯನ್ನು ಬಳಸುತ್ತವೆ.

9. ಪ್ರತಿಪಾದನೆ (ಎ) : ಓಜೋನ್ ಪದರವು ತೀವ್ರ ಹಾನಿಯುಂಟು ಮಾಡುವ ಸೌರ ವಿಕಿರಣದ ಹೆಚ್ಚಾದ ಪ್ರಮಾಣದಿಂದ ಭೂಮಿಯನ್ನು ರಕ್ಷಿಸುತ್ತದೆ.

ಕಾರಣ (ಆರ್): ಓಜೋನ್ ರಂಧ್ರವನ್ನು ಅಂಟಾರ್ಟಿಕಾ ಖಂಡದ ಮೇಲೆ ಪತ್ತೆ ಮಾಡಲಾಗಿದೆ.

10. ಸವನ್ನಾ ಬಯೋಮ್‌ನ ಪ್ರಮುಖ ಹವಾಮಾನ ಗುಣಲಕ್ಷಣಗಳೆಂದರೆ

1. ಈ ಬಯೋಮ್ ಆಫ್ರಿಕಾ ಮತ್ತು ದಕ್ಷಿಣ ಅಮೇರಿಕಾದ ಸಮಶೀತೋಷ್ಣ ವಲಯದ ಆರ್ದ್ರ ಹವಾಮಾನದಲ್ಲಿ ಕಂಡು ಬರುತ್ತದೆ.

2. ತಿಂಗಳ ಸರಾಸರಿ ಉಷ್ಣಾಂಶವು $28^0$ ಸೆ.ಗಿಂತ ಹೆಚ್ಚು.

3. ಸಾಮಾನ್ಯ ಮಳೆ 50 ಸೆಂ.ಮೀ. ನಿಂದ 100 ಸೆಂ.ಮೀ.

ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ. 1 ಮಾತ್ರ　　ಬಿ. 1 ಮತ್ತು 3 ಮಾತ್ರ

ಸಿ. 2 ಮತ್ತು 3 ಮಾತ್ರ　　ಡಿ. 1, 2 ಮತ್ತು 3

11. ಮಂಗಳ ಗ್ರಹಕ್ಕೆ ಸಂಬಧಿಸಿದಂತೆ ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ?

1. ಮಂಗಳ ಗ್ರಹವನ್ನು ಕೆಂಪು ಗ್ರಹವೆಂದೂ ಸಹ ಕರೆಯುತ್ತಿದ್ದು, ಇದು ಭೂಮಿಯ ನೆರೆಯಲ್ಲಿರುವ ಒಂದು ಗ್ರಹ.

2. ಇದು ಡಿಮೋಸ್ ಮತ್ತು ಕ್ಯಾಲಿಸ್ಟೊ ಎಂಬ ಎರಡು ಉಪಗ್ರಹಗಳನ್ನು ಹೊಂದಿದೆ.

3. ಇದು ಮಾನವನಿಂದ ಅತಿ ಹೆಚ್ಚು ಶೋಧಿಸಲ್ಪಟ್ಟಿರುವ ಸೌರವ್ಯೂಹದ ಗ್ರಹ (ಭೂಮಿಯನ್ನು ಬಿಟ್ಟು)

4. ಇದು ಸೌರವ್ಯೂಹದ ಅತಿ ಚಿಕ್ಕ ಗ್ರಹ.

ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆರಿಸಿ.

ಎ. 1 ಮಾತ್ರ　　ಬಿ. 1 ಮತ್ತು 3

ಸಿ. 1, 2 ಮತ್ತು 3　　ಡಿ. ಎಲ್ಲವೂ ಸರಿ

12. ಸಾಗರಗಳ ಗಾತ್ರಗಳ ಪ್ರಕಾರ ಆರೋಹಣ ಕ್ರಮದಲ್ಲಿ ಅವುಗಳ ಸರಿಯಾದ ಕ್ರಮ ಯಾವುದು?

ಎ. ಹಿಂದೂ ಮಹಾಸಾಗರ – ಪೆಸಿಫಿಕ್, ಅಟ್ಲಾಂಟಿಕ್ – ಆರ್ಕ್‌ಟಿಕ್

ಬಿ. ಆರ್ಕ್‌ಟಿಕ್, ಹಿಂದೂ ಮಹಾಸಾಗರ – ಅಟ್ಲಾಂಟಿಕ್ – ಪೆಸಿಫಿಕ್

ಸಿ. ಆರ್ಕ್‌ಟಿಕ – ಅಟ್ಲಾಂಟಿಕ್ – ಪೆಸಿಫಿಕ್ – ಹಿಂದೂ ಮಹಾಸಾಗರ

ಡಿ. ಅಟ್ಲಾಂಟಿಕ್ – ಹಿಂದೂ ಮಹಾಸಾಗರ – ಆರ್ಕ್‌ಟಿಕ್ – ಪೆಸಿಫಿಕ್

13. ಅಮೇರಿಕಾ ಸಂಯುಕ್ತ ಸಂಸ್ಥಾನ – ಕೆನಡಾಗಳ ಪಂಚಮಹಾಸಾಗರಗಳನ್ನು ನಕ್ಷೆಯಲ್ಲಿ 1, 2, 3, 4 ,5 ಎಂದು ಗುರುತಿಸಲಾಗಿದೆ. ಇವುಗಳನ್ನು ಗುರ್ತಿಸಿ.

ಎ. 1. ಅಂಟೇರಿಯೊ 2. ಈರಿ 3. ಸುಪೇರಿಯರ್
4. ಹ್ಯೂರಾನ್ 5. ಮಿಚಿಗನ್

ಬಿ. 1 ಮಿಚಿಗನ್ 2 ಹ್ಯೂರಾನ್ 3. ಸುಪೀರಿಯರ್ 4. ಈರಿ 5. ಆಂಟೇರಿಯೊ

ಸಿ. 1 ಈರಿ 2. ಆಂಟೇರಿಯೊ 3. ಹ್ಯೂರಾನ್
4. ಸುಪೇರಿಯರ್ 5. ಮಿಚಿಗನ್

ಡಿ. 1 ಹ್ಯೂರಾನ್ 2. ಸುಪೀರಿಯರ್ 3. ಈರಿ
4. ಅಂಟೇರಿಯೊ 5. ಮಿಚಿಗನ್

14. ಭಾರತದ ಒಂದು ರಾಜ್ಯವು ಈ ಮುಂದಿನ ಗುಣಲಕ್ಷಣಗಳನ್ನು ಹೊಂದಿದೆ.

1. ಅದರ ಉತ್ತರಭಾಗ ಬಂಜರು ಮತ್ತು ಅರೆಬಂಜರು

2. ಅದರ ಮಧ್ಯ ಭಾಗವು ಹತ್ತಿಯನ್ನು ಉತ್ಪಾದಿಸುತ್ತದೆ

3. ವಾಣಿಜ್ಯ ಬೆಳೆಯ ಕೃಷಿ ಆಹಾರ ಪದಾರ್ಥ ಬೆಳೆಗಳಿಗಿಂತ ಹೆಚ್ಚು ಪ್ರಾಧಾನ್ಯವಾಗಿದೆ.

ಸರಿಯಾದ ರಾಜ್ಯವನ್ನು ಆರಿಸಿ.

ಎ. ತೆಲಂಗಾಣ　　ಬಿ. ಗುಜರಾತ್

ಸಿ. ಕರ್ನಾಟಕ　　ಡಿ. ರಾಜಸ್ಥಾನ

15. ವಾಯುಗುಣವನ್ನು ಕುರಿತ ಈ ಕೆಳಗಿನ ಹೇಳಿಕೆಗಳನ್ನು ಓದಿ.

1. ಮಳೆಯು ಚಳಿಗಾಲದಲ್ಲಿ ಅತಿ ಹೆಚ್ಚು ಕೇಂದ್ರೀಕೃತವಾಗಿರುವ ವಾಯುಗುಣ

2. ಪ್ರಪಂಚದಲ್ಲಿ ಜನರು ವಾಸಿಸುವ ಎಲ್ಲಾ ಭೂಖಂಡಗಳಲ್ಲಿಯೂ ಇದು ಕಂಡುಬರುವುದು

3. ಇದು ಉಪ ಉಷ್ಣವಲಯದಲ್ಲಿ ಕಂಡುಬರುವುದು

4. ಇದು ಜಾಗತಿಕ ಒತ್ತಡ ಪಟ್ಟಿಗಳ ಸ್ಥಳಾಂತರದೊಡನೆ ಸಂಬಂಧವನ್ನು ಹೊಂದಿದೆ.

ಈ ವಾಯುಗುಣವು ಸಂಬಂಧಿಸಿರುವುದು

ಎ. ಉಷ್ಣವಲಯ ಮತ್ತು ಸಮ ಶೀತೋಷ್ಣವಲಯದ ಮರುಭೂಮಿ

ಬಿ. ಉಷ್ಣವಲಯದ ಹುಲ್ಲುಗಾವಲುಗಳು

ಸಿ. ಚೈನಾ ಮಾದರಿಯ ವಾಯುಗುಣ

ಡಿ. ಮೆಡಿಟರೇನಿಯನ್ ವಾಯುಗುಣ

16. ದೇಶವನ್ನು ಅದರ ಪ್ರಮುಖ ಕಲ್ಲಿದ್ದಲು ನಿಕ್ಷೇಪ ವಲಯದೊಂದಿಗೆ ಹೊಂದಿಸಿರಿ ಮತ್ತು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| ದೇಶ | ಪ್ರಮುಖ ಕಲ್ಲಿದ್ದಲು ನಿಕ್ಷೇಪ ವಲಯ |
|---|---|
| ಎ. ಯುಎಸ್ಎ | 1. ಶಾಂಕ್ಸಿ |
| ಬಿ. ಚೀನಾ | 2. ಚಿಕಾಗೊ |
| ಸಿ. ಗ್ರೇಟ್ ಬ್ರಿಟನ್ | 3. ಪಿಟ್ಸ್‌ಬರ್ಗ್ |
| ಡಿ. ಜಪಾನ್ | 4. ಸೌತ್ ವೇಲ್ಸ್ |
| | 5. ಹೊನ್ಸು |

ಸಂಕೇತಗಳು

| | ಎ | ಬಿ | ಸಿ | ಡಿ |
|---|---|---|---|---|
| ಎ. | 2 | 5 | 3 | 1 |
| ಬಿ. | 3 | 5 | 4 | 1 |
| ಸಿ. | 2 | 1 | 3 | 5 |
| ಡಿ. | 3 | 1 | 4 | 5 |

17. 2014ರಲ್ಲಿ ಭಾರತದಲ್ಲಿ ಈ ಮುಂದಿನ ಯಾವ ಚಂಡಮಾರುತಗಳು (ಸೈಕ್ಲೋನ್‌ಗಳು) ಉಂಟಾದವು?

1. ಹುಡ್ ಹುಡ್ 2. ಫೈಲಿನ್

3. ನಿಲೋಫರ್ 4. ಲೆಹರ್

ಸರಿಯಾದ ಉತ್ತರವನ್ನು ಆರಿಸಿ.

ಎ. 1 ಮತ್ತು 2 ಬಿ. 1 ಮತ್ತು 3

ಸಿ. 2 ಮತ್ತು 3 ಡಿ. 3 ಮತ್ತು 4

18. ವಿಶ್ವದ ಅತ್ಯಂತ ಉದ್ದದ ರೈಲ್ವೇ ರಸ್ತೆಗಳಲ್ಲಿ ಒಂದಾಗಿರುವ ಕೆನಡಿಯನ್ ಪೆಸಿಫಿಕ್ ರೈಲ್ವೆಯು ಈ ಮುಂದಿನವುಗಳಲ್ಲಿ ಯಾವುದಾಗಿದೆ?

ಎ. ವ್ಯಾಂಕೂವರ್‌ನಿಂದ ಸೆಂಟ್‌ಜಾನ್ಸ್

ಬಿ. ಸಿಯಾಟ್ಲ್‌ನಿಂದ ಹ್ಯಾಲಿಫ್ಯಾಕ್ಸ್

ಸಿ. ಪ್ರಿನ್ಸ್ ರುಪರ್ಟ್‌ನಿಂದ ಸೆಂಟ್‌ಜಾನ್

ಡಿ. ವ್ಯಾಂಕೂವರ್‌ನಿಂದ ಹ್ಯಾಲಿಫ್ಯಾಕ್ಸ್

19. ರಾಷ್ಟ್ರೀಯ ಉದ್ಯಾನವನವನ್ನು ಅದರ ರಾಜ್ಯದೊಂದಿಗೆ ಹೊಂದಿಸಿ ಮತ್ತು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| ರಾಜ್ಯ | ರಾಷ್ಟ್ರೀಯ ಉದ್ಯಾನವನ |
|---|---|
| ಎ. ಮೇಘಾಲಯ | 1. ಹೆಮಿಸ್ |
| ಬಿ. ಜಾರ್ಖಂಡ್ | 2. ನಮ್ದಾಫಾ |
| ಸಿ. ಅರುಣಾಚಲ ಪ್ರದೇಶ | 3. ಬಾಲ್ಫಾಕ್ರಮ್ |
| ಡಿ. ಜಮ್ಮು ಮತ್ತು ಕಾಶ್ಮೀರ | 4. ಹಜಾರಿ ಬಾಗ್ |

ಸಂಕೇತಗಳು

| | ಎ | ಬಿ | ಸಿ | ಡಿ |
|---|---|---|---|---|
| ಎ. | 2 | 1 | 4 | 2 |
| ಬಿ. | 3 | 4 | 2 | 1 |
| ಸಿ. | 3 | 1 | 4 | 2 |
| ಡಿ. | 2 | 4 | 1 | 3 |

20. ಕರ್ನಾಟಕದ ಕರಾವಳಿ ಬಯಲು, ಇದು ಅಲೆ ವಿನ್ಯಾಸದ ಪ್ರದೇಶವಾಗಿದೆ. ಈ ಹೇಳಿಕೆಗೆ ಸಂಬಂಧಿಸಿದಂತೆ ಮುಂದಿನ ಯಾವುದು ಸರಿಯಾಗಿದೆ?

ಎ. ಇದು ಜ್ವಾಲಾಮುಖಿ ಚಟುವಟಿಕೆಯ ಫಲಿತಾಂಶವಾಗಿದೆ

ಬಿ. ಇದು (ಸವೆತ) ಕ್ಷರಣ ಬಯಲಾಗಿದೆ

ಸಿ. ಇದು ನಿಕ್ಷೇಪನ ಬಯಲಾಗಿದೆ

ಡಿ. ಮೇಲಿನ ಎಲ್ಲವೂ

21. ಜಲಾನಯನ ಅಭಿವೃದ್ಧಿ ಕಾರ್ಯಕ್ರಮದ ಗುರಿಯು

1. ಮಣ್ಣಿನ ಸವೆತವನ್ನು ನಿಯಂತ್ರಿಸುವುದು

2. ನೀರಿನ ಸಂರಕ್ಷಣೆ ಹಾಗೂ ಅಂತರ್ಜಲದ ನಿರ್ವಹಣೆ

3. ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಸೌಕರ್ಯ ಕಲ್ಪಿಸುವುದು

4. ಮಳೆಗಾಲದಲ್ಲಿನ ನದಿ ಪ್ರವಾಹವನ್ನು ನಿಯಂತ್ರಿಸುವುದು

ಕೆಳಗೆ ಕೊಟ್ಟಿರುವ ಸಂಕೇತಗಳನ್ನು ಉಪಯೋಗಿಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ. 1 ಮತ್ತು 2 ಬಿ. 2 ಮತ್ತು 3

ಸಿ. 1 ಮತ್ತು 3 ಡಿ. ಮೇಲಿನ ಯಾವುದೂ ಅಲ್ಲ

22. ಕಳಸ ಬಂಡೂರಿ ಜಲವಿವಾದವು.......ಗೆ ಸಂಬಂಧಿಸಿದೆ.

ಎ. ಭೀಮಾ ನದಿ ನೀರಿನ ಹಂಚಿಕೆ

ಬಿ. ಮಲಪ್ರಭಾ ನದಿ ನೀರಿನ ಹಂಚಿಕೆ

ಸಿ. ಮಾಂಡೋವಿ ನದಿ ನೀರಿನ ಹಂಚಿಕೆ

ಡಿ. ಭದ್ರಾ ನದಿ ನೀರಿನ ಹಂಚಿಕೆ

23. ಕರ್ನಾಟಕದ ರೈಲ್ವೆ ನಕ್ಷೆಯ ವಿಶ್ಲೇಷಣೆಯು ಏನನ್ನು ಸೂಚಿಸುತ್ತದೆ?

1. ಕೊಡಗು ಜಿಲ್ಲೆಯು ರೈಲ್ವೆಮಾರ್ಗ ಹೊಂದಿಲ್ಲದ ಕರ್ನಾಟಕದ ಏಕೈಕ ಜಿಲ್ಲೆಯಾಗಿದೆ.

2. ಪೂರ್ವದಿಂದ ಪಶ್ಚಿಮದವರೆಗೆ ಮಲ್ನಾಡನ್ನು

ಹಾಯ್ದುಹೋಗುವ ಏಕೈಕ ರೈಲ್ವೆ ಹಾದಿಯೆಂದರೆ ಹಾಸನ – ಮಂಗಳೂರು

ಸರಿಯಾದ ಉತ್ತರವನ್ನು ಆರಿಸಿ.

ಎ. 1 ಸರಿಯಾಗಿದೆ ಆದರೆ 2 ಸರಿಯಾಗಿಲ್ಲ

ಬಿ. 2 ಸರಿಯಾಗಿದೆ ಆದರೆ 1 ಸರಿಯಾಗಿಲ್ಲ

ಸಿ. 1 ಮತ್ತು 2 ಎರಡೂ ಸರಿಯಾಗಿಲ್ಲ

ಡಿ. 1 ಮತ್ತು 2 ಎರಡೂ ಸರಿಯಾಗಿವೆ

24. ಕರ್ನಾಟಕದಲ್ಲಿ ಅತ್ಯಂತ ಕಡಿಮೆ ಮಳೆ ಬೀಳುವ ಸ್ಥಳ

ಎ. ಕೊಡಗು ಬಿ. ಚಳ್ಳಕೆರೆ

ಸಿ. ಬೀದರ್ ಡಿ. ಪುಲಿಂಗೋತ್

25. ಪಟ್ಟಿ1 (ಹೆಲಿಕಾಟ್ಪರ್ ಮಾದರಿ)ರೊಂದಿಗೆ ಪಟ್ಟಿ2ನ್ನು ಹೊಂದಿಸಿ, ಕೆಳಗೆ ಕೊಟ್ಟಿರುವ ಸಂಕೇತಗಳನ್ನು ಉಪಯೋಗಿಸಿ ಸರಿಯಾದ ಉತ್ತರವನ್ನು ಗುರುತಿಸಿ.

| ಪಟ್ಟಿ – 1 | ಪಟ್ಟಿ – 2 |
|---|---|
| ಎ. ಕಾವೇರಿ | 1. ಹಿಡ್ಕಲ್ |
| ಬಿ. ಮಲಪ್ರಭಾ | 2. ಗೇರುಸೊಪ್ಪ |
| ಸಿ. ಶರಾವತಿ | 3. ಕೆಆರ್‌ಎಸ್ |
| ಡಿ. ಘಟಪ್ರಭಾ | 4. ನವಿಲತೀರ್ಥ |

ಸಂಕೇತ

| | ಎ | ಬಿ | ಸಿ | ಡಿ |
|---|---|---|---|---|
| ಎ. | 2 | 1 | 3 | 4 |
| ಬಿ. | 3 | 4 | 2 | 1 |
| ಸಿ. | 4 | 1 | 3 | 2 |
| ಡಿ. | 1 | 3 | 4 | 2 |

26. ಅವುಗಳ ಭೌಗೋಳಿಕ ವಿಸ್ತಾರದ ಆಧಾರದ ಮೇಲೆ ಈ ಮುಂದಿನ ಜಿಲ್ಲೆಗಳ ಸರಿಯಾದ ಆರೋಹಣ ಕ್ರಮ ಏನು?

1. ಗುಲ್ಬರ್ಗಾ (ಕಲ್ಬುರ್ಗಿ)

2. ತುಮಕೂರು

3. ಬೆಳಗಾಂ

4. ಬಿಜಾಪುರ (ವಿಜಯಪುರ)

ಸರಿಯಾದ ಉತ್ತರವನ್ನು ಆರಿಸಿ.

ಎ. 2,3,4,1 ಬಿ. 2,3,1,4 ಸಿ. 4,1,2,3 ಡಿ. 4,2,1,3

27. ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಈ ಮುಂದಿನ ಯಾವ ಎರಡು ನಗರಗಳಿಗೆ ಬಸ್ ಸೇವೆ ಒದಗಿಸಲಾಗಿದೆ?

ಎ. ಅಮೃತ್‌ಸರ್ – ಲಾಹೋರ್

ಬಿ. ಇಸ್ಲಮಾಬಾದ್ – ಅಮೃತ್‌ಸರ್

ಸಿ. ಇಸ್ಲಮಾಬಾದ್ – ಡೆಲ್ಲಿ

ಡಿ. ಲಾಹೋರ್ – ಡೆಲ್ಲಿ

28. ಇಂದು ಭಾರತದ ಹತ್ತಿಬಟ್ಟೆಗಳನ್ನು ಜಗತ್ತಿನಲ್ಲೇ ಅತಿ ಹೆಚ್ಚು ಕೊಂಡುಕೊಳ್ಳುವ ರಾಷ್ಟ್ರ ಯಾವುದು?

ಎ. ಯು.ಕೆ. ಬಿ. ಯು.ಎಸ್.ಎ

ಸಿ. ಸಿ.ಐ.ಎಸ್. ಡಿ. ಫ್ರಾನ್ಸ್

29. ಚಿರಾಪುಂಜಿ ಮತ್ತು ಮೌಸಿನ್‌ರಾಂ ಹಳ್ಳಿಗಳಲ್ಲಿ ಹೆಚ್ಚು ಮಳೆ ಬೀಳುವುದಕ್ಕೆ ಕಾರಣ

ಎ. ಭಾರತದ ಇತರ ಯಾವುದೇ ಭಾಗಗಳಿಗಿಂತಲೂ ಈ ಹಳ್ಳಿಗಳು ಅತಿ ಹೆಚ್ಚು ಎತ್ತರದಲ್ಲಿರುವುದು

ಬಿ. ಬಂಗಾಳ ಕೊಲ್ಲಿಗೆ ಅತಿ ಸಮೀಪದಲ್ಲಿರುವುದು

ಸಿ. ನೈರುತ್ಯ ಮಾನ್ಸೂನ್ ಮತ್ತು ಈಶಾನ್ಯ ಮಾನ್ಸೂನ್ ಮಾರುತಗಳ ಪ್ರಭಾವ

ಡಿ. ಮಳೆಭರಿತ ಮಾರುತಗಳು ಖಾಸೀ ಬೆಟ್ಟಗಳಲ್ಲಿ ಬಂಧಿತವಾಗಿರುವುದು

30. ಕರ್ನಾಟಕದಲ್ಲಿ ಇತ್ತೀಚೆಗೆ ಅನುಷ್ಠಾನಕ್ಕೆ ಬಂದ ನಮ್ಮ ಮನೆ ಗೃಹ ಯೋಜನೆಯು ಒಂದು ......... ಆಗಿದೆ.

ಎ. ನಗರ ಬಡವರ ಗೃಹ ನಿರ್ಮಾಣಕ್ಕಾಗಿ ಬಡ್ಡಿ ಸಹಾಯಧನ ಯೋಜನೆ

ಬಿ. ಮನೆ ರಹಿತ ಗ್ರಾಮೀಣ ಬಡವರಿಗಾಗಿ ಸಹಾಯಧನ ಯೋಜನೆ

ಸಿ. ಗ್ರಾಮೀಣ ದುರ್ಬಲ ವರ್ಗಗಳಿಗಾಗಿ ಗೃಹಗಳು

ಡಿ. ಗ್ರಾಮೀಣ ಬಡವರಿಗೆ ಸಹಾಯಧನ ಗೃಹನಿರ್ಮಾಣ ಸೌಕರ್ಯ

31. ಪಾವತಿಗಳ ಬಾಕಿಯ ಚಾಲ್ತಿ ಲೆಕ್ಕವು ಇದನ್ನು ಒಳಗೊಳ್ಳುತ್ತದೆ.

ಎ. ವ್ಯಾಪಾರದ ಬಾಕಿಯನ್ನು ಮಾತ್ರ

ಬಿ. ನಿವ್ವಳ ಹೂಡಿಕೆ ಆದಾಯಗಳು ಮತ್ತು ನಿವ್ವಳ ವರ್ಗಾವಣೆಗಳು

ಸಿ. ವ್ಯಾಪಾರ ಬಾಕಿ, ನಿವ್ವಳ ಹೂಡಿಕೆ ಆದಾಯಗಳು ಮತ್ತು ನಿವ್ವಳ ವರ್ಗಾವಣೆಗಳು

ಡಿ. ನಿವ್ವಳ ವರ್ಗಾವಣೆಗಳು ಮತ್ತು ವ್ಯಾಪಾರ ಬಾಕಿ

32. ವಿವಿಧ ಬಳಕೆಗಾಗಿ ನೀರಿನ ಲಭ್ಯತೆ ಮತ್ತು ಅಗತ್ಯತೆಯ ನಿರ್ಧರಣೆ –2000 ಮೇಲಿನ ಸ್ಥಾಯಿ ಉಪ ಸಮಿತಿಯ ವರದಿಯ ಪ್ರಕಾರ 2025ರಲ್ಲಿ ಭಾರತದಲ್ಲಿ ನೀರಾವರಿಗೆ ಅಂದಾಜು ಮಾಡಲಾದ ನೀರಿನ ಬೇಡಿಕೆಯು ....... ರಷ್ಟಿರುತ್ತದೆ.

ಎ. 618 ಬಿಲಿಯನ್ ಕ್ಯೂಬಿಕ್ ಮೀಟರುಗಳು

ಬಿ. 910 ಬಿಲಿಯನ್ ಕ್ಯೂಬಿಕ್ ಮೀಟರುಗಳು

ಸಿ. 1024 ಬಿಲಿಯನ್ ಕ್ಯೂಬಿಕ್ ಮೀಟರುಗಳು